ಮಾಡಿದ್ದಾರೆ. ಸುಮಾರು ೪೦-೫೦ ಜನಕ್ಕೆ ನಾವು ಇದನ್ನು ಒಪ್ಪಿಕೊಳ್ಳುವುದಾದರೆ ಇಡೀ ರಾಜ್ಯ ದ್ಯಂತ ಇರತಕ್ಕ ಗ್ಯಾಂಗ್‌ಮನ್ ಕೂಲಿಗಳಿಗೂ ಇದು ಆನ್ವಯವಾದರೆ ಫೈನಾನ್ಷಿಯಲ್ ಇಂಪ್ಲಿಕೇಷನ್ ಹೆಚ್ಚಾಗುತ್ತದೆ. ಆ ಕಾರಣದಿಂದ ಇದನ್ನು ಒಪ್ಪುವುದಕ್ಕಾಗುವುದಿಲ್ಲವೆಂದು ಹೈಕೋರ್ಟಿಗೆ ರಿಟ್ ಹೋಗಿದೆ. ಅಲ್ಲಿ ತೀರ್ಮಾನವಾಯಿತೋ ಇಲ್ಲವೋ ಗೊತ್ತಿಲ್ಲ. ಆದರೆ ಮಾನ್ಯ ಸದಸ್ಯರು ಅಲ್ಲಿ ಸಹ ತೀರ್ಮಾನವಾಗಿ ಸುಪ್ರೀಂ ಕೋರ್ಟಿನಲ್ಲಿ ಕೇಸ್ ಹಾಕುತ್ತಿದ್ದೇವೆಂದು ಹೇಳಿದರು. ಈ ಮಾಹಿತಿ ಅವರಿಗೆ ಹೇಗೆ ಸಿಕ್ಕಿತೋ ನನಗಂತೂ ಗೊತ್ತಿಲ್ಲ. ನನಗೆ ಗೊತ್ತಿರತಕ್ಕ ಮಾಹಿತಿ ಪ್ರಕಾರವಾಗಿ ಹೈಕೋರ್ಟಿನಲ್ಲಿ ಕೇಸ್ ಹಾಕಿ ತೀರ್ಮಾನ ಮಾಡಿದ್ದೇವೆ ಅಷ್ಟೆ.

ಕಾರಂಜಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸುವ ಕುರಿತು

೪೮೭ (೧೧೪೬) ಶ್ರೀ ನಾರಾಯಣರಾವ್‌ಮನಳ್ಳಿ (ಬೀದರ್).—ಮಾನ್ಯ ಲೋಕೋಪಯೋಗಿ ಹಾಗೂ ನಿರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕಾರಂಜಿ ನದಿಗೆ ಅಡ್ಡಲಾಗಿ ಬಿದರೆ ಚಿಂಚೋಳಿ-ಮನಹಳ್ಳಿ ಮಾರ್ಗದಲ್ಲಿ ಬಂಗೂರ್‌ಹಳ್ಳಿ ಹತ್ತಿರ ಸೇತುವೆ ನಿರ್ಮಿಸಲು ಸರ್ಕಾರದ ಹತ್ತಿರ ಯೋಜನೆ ಇದೆಯೇ ?

ಆ) ಹಾಗಿದ್ದಲ್ಲಿ ಕೆಲಸ ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಈ ಕೆಲಸವು ೮೪-೮೫ರ ಆಯವ್ಯಯದ ಅಂದಾಜು ಪಟ್ಟಿಯಲ್ಲಿ ಸೇರಿದೆ.

ಆ) ಕೆಲಸದ ಅಂದಾಜಿಗೆ ಮಂಜೂರಾತಿಯನ್ನು ಕೊಟ್ಟಮೇಲೆ ಕೆಲಸವನ್ನು ಪ್ರಾರಂಭಿಸ ಲಾಗುವುದು.

ಕಾರಂಜಿ ರಿವರ್ ಮೇಲೆ ಸೇತುವೆಯನ್ನು ಕಟ್ಟಬೇಕು ಎನ್ನುವ ಬಗ್ಗೆ ಹಿಂದಿನ ಮುಖ್ಯ ಮಂತ್ರಿ ಗಳವರು ಅಲ್ಲಿಗೆ ಭೆಟಿ ಕೊಟ್ಟಿದ್ದಾಗ ಸೂಚನೆಕೊಟ್ಟು ಬಂದಿದ್ದರು. ಆದರೆ ಆವರ ಬಗ್ಗೆ ೧೯೮೨-೮೩ರ ಬಜೆಟ್‌ನಲ್ಲಿ ಅವರು ಹಣವನ್ನು ಇಟ್ಟಿರಲಿಲ್ಲ. ಆ ಕಾರಣದಿಂದ ಆ ಕೆಲಸವನ್ನು ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ. ಆದುದರಿಂದ ನಾವು ಈಗ ೧೯೮೪-೮೫ರಲ್ಲಿ ೧೨ ಲಕ್ಷರೂಪಾಯಿಗಳ ಅಂದಾಜು ಮಾಡಿ, ಈ ಸೇತುವೆಯನ್ನು ಕಟ್ಟುವುದಕ್ಕೆ ೧ ಸಾವಿರ ರೂಪಾಯಿಗಳನ್ನು ಟೋಕನ್ ಗ್ರಾಂಟನ್ನು ಸೇರಿಸಿದ್ದೇವೆ. ನಮಗೆ ಸಂಪನ್ಮೂಲಗಳ ಕೊರತೆ ಇದೆಯೆಂದು ಮೊದಲೇ ಹೇಳಿದ್ದೇನೆ. ನಮಗೆ ಹೆಚ್ಚಿಗೆ ಹಣ ಸಿಕ್ಕುವುದಾದರೆ ಈ ಕೆಲಸವನ್ನು ತಕ್ಷಣವೇ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ನಾರಾಯಣರಾವ್ ಮನಹಳ್ಳಿ.—ಮಾನ್ಯ ಉಪಾಧ್ಯಕ್ಷರೆ, ಬಜೆಟ್‌ನಲ್ಲಿ ಕಾಣಿಸಿದ ಪ್ರಕಾರ ಇದಕ್ಕೆ ೧೨ ಲಕ್ಷ ಇಟ್ಟಿದ್ದಾರೆ. ಆದರೆ ಎಸ್ಟಿಮೇಟ್ ೧೬ ಲಕ್ಷ ಆಗಿದೆ. ಇದರ ಸಲುವಾಗಿ ಏನು ಹೇಳುತ್ತೀರಿ ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಎಸ್ಟಿಮೇಟ್ ಹೆಚ್ಚಾಗಿದೆಯೆಂದು ಹೇಳುತ್ತಾ ಇದ್ದಾರೆ. ಅವರು ಏನು ಕೊಟ್ಟಿದ್ದಾರೆ ಅದರ ಮೇಲೆಯೇ ನಾವು ಸೇರಿಸಿದ್ದೇವೆ ಅದು ಏನೇ ಇರಲಿ, ನಮಗೆ ಸ್ವಲ್ಪ ಹಣ ಸಿಕ್ಕಿದರೆ ಈ ಕೆಲಸ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ.

ಹಿಪ್ಪರಗಿ ಯೋಜನೆ

೪೮೮ (೧೨೫೨) ಶ್ರೀ ಎಂ.ಜಿ. ಜರತಾರ್‌ಗರ್ (ಹುಬ್ಬಳ್ಳಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಹಿಪ್ಪರಗಿ ಯೋಜನೆಯನ್ನು ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು ಮತ್ತು ಅಂದಾಜು ವೆಚ್ಚವೆಷ್ಟು ?

ಆ) ಮೇಲ್ಕಂಡ ಯೋಜನೆಗೆ ಈವರೆಗೆ ಮಾಡಿದ ವೆಚ್ಚವೆಷ್ಟು? ಹಾಗೂ ಅದರ ರೂಪುರೇಷೆ ಗಳೇನು ?

ಇ) ಮೇಲ್ಕಂಡ ಯೋಜನೆ ಈಗ ಯಾವ ಹಂತದಲ್ಲಿದೆ ಮತ್ತು ಇನ್ನೆಷ್ಟು ವರ್ಷಗಳಲ್ಲಿ ಈ ಯೋಜನೆಯನ್ನು ಮುಗಿಸುವಂತೆ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ?

ಈ) ಮೇಲ್ಕಂಡ ಯೋಜನೆಯನ್ನು ಪೂರ್ಣಗೊಳಿಸಲು ಬೇಕಾಗುವ ಮೊತ್ತವೆಷ್ಟು ?

ಶ್ರೀ ಹೆಚ್.ಡಿ. ದೇವೇಗೌಡ (ಯೋಜನೆ ಮತ್ತು ನೀರಾವರಿ ಮಂತ್ರಿಗಳು).—

ಬಿ) ೧೯೭೫ರಲ್ಲಿ ಅಂದಾಜು ವೆಚ್ಚ ೨೧.೫೩ ಕೋಟಿ ರೂ. ಗಳು.

ಆ) ಜನವರಿ, ೧೯೮೪ರವರೆಗೆ ಆಗಿರುವ ವೆಚ್ಚ ೪೧೪.೮೫ ಲಕ್ಷ ರೂಪಾಯಿಗಳು. ಹಿಪ್ಪರಗಿ ಯೋಜನೆಯಂತೆ ಹಿಪ್ಪರಗಿ ಗ್ರಾಮದ ಬಳಿ ಕೃಷ್ಣಾನದಿಗೆ ಅಡ್ಡಲಾಗಿ ಗೇಟಿರುವ ಕಲ್ಲಿನ ಆಣೆಕಟ್ಟನ್ನು ನಿರ್ಮಿಸಿ, ಕೃಷ್ಣಾದಂಡೆಯ ಎಡದಂಡೆಯಲ್ಲಿ ಹಳಿಯಾಳ ಮತ್ತು ಐನಾಪುರಗಳ ಬಳಿ ಜಲಾಶಯದಿಂದ ಎರಡು ಯಾತ ನೀರಾವರಿಗಳನ್ನು ಉದ್ದೇಶಿಸಲಾಗಿದೆ. ಉದ್ದೇಶಿಸಿರುವ ಅಚ್ಚುಕಟ್ಟು ವಿಸ್ತೀರ್ಣ ೫೦,೫೮೦ ಹೆಕ್ಟೇರುಗಳು (೧.೨೫ ಲಕ್ಷ ಎಕರೆಗಳು)

ಇ) ಆಣೆಕಟ್ಟಿನ ಎಡದಂಡೆಯಲ್ಲಿ ಮಣ್ಣಿನ ಕೆಲಸವನ್ನು ಮತ್ತು ಕಲ್ಲಿನಕಟ್ಟಡಕ್ಕೆ ಕೆಲಭಾಗಗಳಲ್ಲಿ ಅಡಿಪಾಯದ ತೋಡುವಿಕೆಯನ್ನು ಕೈಗೊಳ್ಳಲಾಗಿದೆ. ಇತ್ತೀಚಿನ ಯೋಜನಾವರದಿಯನ್ನು ಪರಿಶೀಲಿಸಿದ ತಾಂತ್ರಿಕ ಸಮಿತಿಯು, ಕೆಲವು ತಾಂತ್ರಿಕ ಅನ್ವೇಷಣೆಗಳಾಗಬೇಕೆಂದು ಸೂಚಿಸಿದೆ. ಅನ್ವೇಷಣೆ ಮುಗಿದು, ವರದಿ ಸಿದ್ಧವಾದನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಈ) ೯೭೯೫.೫೩ ಲಕ್ಷ ರೂಪಾಯಿಗಳು (೧೯೮೨–೮೩ ದರಗಳಂತೆ)

ಶ್ರೀ ಎಂ.ಜಿ. ಜರತಾರ್‌ಘರ್.—ಈ ಹಿಪ್ಪರಗಿ ಯೋಜನೆ ಬಹಳಷ್ಟು ಜನರಿಗೆ ಆವಶ್ಯಕವಾದಂಥ ಯೋಜನೆ. ಈ ಯೋಜನೆಯ ಗಾತ್ರ ೨೧ ಕೋಟಿ ಇದ್ದದ್ದು ಹೋಗಿ ೧೯೮೨ರಲ್ಲಿ ೯೭ ಕೋಟಿ ಆಗಿದೆ. ಈಗ ೧೯೮೪ರಲ್ಲಿ ೧೨೫ ಕೋಟಿಯಾಗುತ್ತದೆಯೋ ೧೫೦ ಕೋಟಿಯಾಗುತ್ತದೆಯೋ ಗೊತ್ತಿಲ್ಲ. ಈ ಯೋಜನೆ ರೈತರಿಗೆ ಕುತೂಹಲ ಕೆರಳಿಸಿದೆ. ಏಕೆಂದರೆ. ಅದು ಕ್ಷಾಮಪೀಡಿತ ಪ್ರದೇಶವಾಗಿದೆ. ಹಾಗಾಗಿ ಅಲ್ಲಿಯ ಜನರಿಗೆ ಇದು ವರದಾನವಾಗಿರುವುದರಿಂದ ಈ ಯೋಜನೆಯನ್ನು ಸಫಲವಾಗಿ ಮಾಡಲು ವಿಳಂಬವಾಗಲಿಕ್ಕೆ ಕಾರಣವೇನು ?

ಶ್ರೀ ಹೆಚ್.ಡಿ. ದೆವೆಗೌಡ.—ಈ ಬಗ್ಗೆ ಈ ಮನೆಯಲ್ಲಿ ಅನೇಕಸಾರಿ ಉತ್ತರ ಕೊಟ್ಟಿದ್ದೇನೆ. ಈ ಯೋಜನೆಯನ್ನು ನಾನು ಪರಿಶೀಲನೆ ಮಾಡಿ ನೋಡಿದ್ದೇನೆ. ಮೇಸನರಿ ಡ್ಯಾಂ ಕಟ್ಟತಕ್ಕದ್ದು ಇದೆ, ಇದಕ್ಕೆ ನಾಲ್ಕು ಕೋಟಿ ಖರ್ಚು ಮಾಡಿದ್ದೇವೆ. ಮೇಸನರಿ ಡ್ಯಾಂ ಕಟ್ಟಿ, ರಿಸರ್ವಾಯರ್‌ನಲ್ಲಿ ೨ ಲಿಫ್ಟ್ ಇರಿಗೇಷನ್ ಮಾಡಬೇಕು. ಒಂದೊಂದು ಲಿಫ್ಟ್ ಇರಿಗೇಷನ್ ಸ್ಕೀಂಗೆ ಸುಮಾರು ೩೦–೩೫ ಕೋಟಿ ಖರ್ಚಾಗುತ್ತದೆ. ಇದರಲ್ಲಿ ಫ್ಲೋ ಇರಿಗೇಷನ್ ಪ್ರಶ್ನೆ ಇಲ್ಲ. ನಮ್ಮ ರಾಜ್ಯದಲ್ಲಿ ಇಷ್ಟೊಂದು ವೆಚ್ಚದಲ್ಲಿ ನಿರ್ಮಾಣ ಮಾಡತಕ್ಕಂಥ ಪ್ರಾಜೆಕ್ಟ್ ಮತ್ತೊಂದು ಇಲ್ಲ. ಆದರೂ ಇದನ್ನು ಕೈಬಿಡಬೇಕು ಎನ್ನತಕ್ಕ ಪ್ರಶ್ನೆ ಇಲ್ಲ. ಇವೊತ್ತು ಇರತಕ್ಕಂಥ ಪರಿಸ್ಥಿತಿಯಲ್ಲಿ ಇದನ್ನು ತೆಗೆದುಕೊಳ್ಳುವುದು ಕಷ್ಟವಿದೆ. ವಿಶ್ವಬ್ಯಾಂಕಿನ ಮುಖೇನ ಅಥವಾ ಬೇರೆ ಯಾವುದಾದರೂ ಸಂಸ್ಥೆಗಳಿಂದ ಹಣವನ್ನು ಇದರಲ್ಲಿ ತೊಡಗಿಸುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಇದಕ್ಕೆ ೧೦೦ ಕೋಟಿ ರೂಪಾಯಿಗಳಾದರೂ ಖರ್ಚಾಗುತ್ತದೆ. ಆ ಭಾಗದ ಜನರ ಕಷ್ಟವನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ಎಷ್ಟು ಖರ್ಚಾದರೂ ಹಿಪ್ಪರಗಿ ಬ್ಯಾರೇಜನ್ನು ಮಾಡಬೇಕು ಎಂಬ ಯೋಚನೆ ಇದೆ. ಈಗ ಇದಕ್ಕೆ ಸುಪನ್ಯೂಲ ಒದಗಿಸಿಕೊಡುವ ಸ್ಥಿತಿಯಲ್ಲಿಲ್ಲ.

ಶ್ರೀ ಜಿ.ಎಸ್. ಬಾಗಲಕೋಟಿ.—ಇದು ಅಪ್ಪರ್‌ಕೃಷ್ಣನಲ್ಲಿ ಮುಳುಗಡೆಯಾಗುವಂಥ ಪ್ರಸಂಗ ವಿದೆ. ಆದುದರಿಂದ ಮುಳುಗಡೆಯಾಗುವುದಕ್ಕೆ ಪೂರ್ವದಲ್ಲಿ ಕೊನೆಯಪಕ್ಷ ಅಡ್ಡಗೋಡೆ ಕಟ್ಟಿ ಜನರಿಗೆ ಇರುವಂಥ ತೊಂದರೆಯನ್ನು ನಿವಾರಣೆ ಮಾಡುತ್ತೀರಾ ?

ಶ್ರೀ ಹೆಚ್.ಡಿ. ದೇವೇಗೌಡ.—ಆಲಮಟ್ಟಿ ಜಲಾಶಯ ನಿರ್ಮಾಣವಾದರೆ ಇದು ಸಬ್‌ಮರ್ಜ್ ಆಗುತ್ತದೆ ಎನ್ನುವ ಭಯವಿದೆ. ಆಲಮಟ್ಟಿಯು ನೀರನ್ನು ಹೆಚ್ಚಿಗೆ ನಿಲ್ಲಿಸುವುದಕ್ಕೆ ಇದನ್ನು ಮೇಲ್ಮಟ್ಟಕ್ಕೆ ಎತ್ತಿ ಕೆಲಸ ಮಾಡಿದರೆ ಮುಂದೆ ಅನಾಹುತ ತಪ್ಪಿಸಬಹುದು ಎನ್ನುವುದು ಮಾನ್ಯ ಸದಸ್ಯರ ಅಭಿಪ್ರಾಯ. ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ.ಜಿ. ಜರತಾರ್‌ಗರ್.—ವಿಶ್ವಬ್ಯಾಂಕಿನಿಂದ ಹಣ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದಿರಿ. ಕೇಂದ್ರ ಸರ್ಕಾರಕ್ಕೆ ಒತ್ತಾಯಮಾಡಿ ಹಣ ತೆಗೆದುಕೊಳ್ಳತಕ್ಕ ಪ್ರಯತ್ನ ಆಗಿದೆಯೇ ?

ಶ್ರೀ ಹೆಚ್.ಡಿ. ದೇವೇಗೌಡ.—ಕೇಂದ್ರ ಸರ್ಕಾರ ಪ್ಲಾನ್ ಪ್ರಾಜೆಕ್ಟ್‌ಗಳಿಗೆ ಏನು ಕೊಡಬೇಕೋ ಅದನ್ನು ಕೊಡತಕ್ಕ ಭಾಗಾಂಶವಿದೆ. ಇದೂ ಪ್ಲಾನ್ ಪ್ರಾಜೆಕ್ಟ್‌ಲ್ಲಿ, ನಾನ್ ಪ್ಲಾನ್ ಪ್ರಾಜೆಕ್ಟ್ ಅಲ್ಲ. ಇದನ್ನು ಏಳನೆಯ ಪ್ಲಾನ್‌ನಲ್ಲಿ ತೊಡಗಿಸತಕ್ಕ ಬಗ್ಗೆ ಸಾಕಷ್ಟು ಇಕ್ಕಟ್ಟು ಇದೆ. ಇದಕ್ಕೆ ದುಬಾರಿ ವೆಚ್ಚವಾಗುತ್ತದೆ. ಆದರೂ ಇರತಕ್ಕ ಇತಿಮಿತಿಯೊಳಗೆ ನೋಡಿಕೊಂಡು ಇದಕ್ಕೆ ಹಣವನ್ನು ತೊಡಗಿಸುವುದಕ್ಕೆ ಕಷ್ಟವಿದೆಯೆಂದು ಹೇಳಿದ್ದೇನೆ. ಬೇರೆ ಬೇರೆ ಸಂಸ್ಥೆಗಳಿಂದ ಏನಾದರೂ ಹಣ ತೊಡಗಿಸುವುದಕ್ಕೆ ಸಾಧ್ಯವೇ ಎಂಬ ಯೋಚನೆ ಇದೆ. ಅದು ಇಲ್ಲದೇ ಹೋದರೆ ಏನೇ ಪ್ಲಾನ್‌ನಲ್ಲಿ ಸೇರಿಸುವುದಕ್ಕೆ ಪರಿಶೀಲನೆ ಮಾಡುತ್ತೇನೆ, ಆಶ್ವಾಸನೆ ಕೊಡುವುದಿಲ್ಲ. ಏಕೆಂದರೆ ಆಶ್ವಾಸನೆ ಕೊಟ್ಟು ನಿಮ್ಮ ಟೀಕೆಗೆ ನಾನು ಒಳಗಾಗುವುದಿಲ್ಲ.

ಕೃಷ್ಣಮೇಲ್ದಂಡೆ ಯೋಜನೆಯಿಂದ ರಾಯಚೂರು ಜಿಲ್ಲೆಯ ಜಮೀನಾಂಗಳಿಗೆ ನೀರು ಕೊಡುವ ವ್ಯವಸ್ಥೆ

(೪೪೯) ೧೧೨೪ ಡಾ|| ಸಂಗಮೇಶ್ವರ ಸರದಾರ (ರಾಯಚೂರು).—ಪಾವ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಯಚೂರು ಜಿಲ್ಲೆಯಲ್ಲಿರುವ ಲಿಂಗಸಗೂರು, ದೇವದುರ್ಗ, ರಾಯಚೂರು ತಾಲ್ಲೂಕಿನ ಜಮೀನು ಕೃಷ್ಣ ಮೇಲ್ದಂಡೆಯ ಎಡನಾಲೆ ಕೆಳಗೆ ಬರುವುದರಿಂದ ಮೊದಲನೇ ಹಂತದಲ್ಲಿ ಈ ಜಮೀನುಗಳಿಗೆ ನೀರು ಕೊಡುವ ವ್ಯವಸ್ಥೆ ಮಾಡುವುದು ಸರ್ಕಾರದವರಲ್ಲಿದೆಯೇ ?

ಆ) ಹಾಗಿದ್ದಲ್ಲಿ, ಯಾವಾಗ ನೀರು ಕೊಡುವ ವ್ಯವಸ್ಥೆಯನ್ನು ಸರ್ಕಾರದವರು ಪೂರ್ಣಗೊಳಿಸುವರು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಈ ತಾಲ್ಲೂಕುಗಳು ಎಡದಂಡೆ ಕಾಲುವೆ ಕೆಳಗೆ ಬರುವುದಿಲ್ಲ. ಆದ್ದರಿಂದ ಮೊದಲನೇ ಹಂತದಲ್ಲಿ ನೀರು ಕೊಡಲು ಬರುವುದಿಲ್ಲ.

ಆ) ಈ ತಾಲ್ಲೂಕುಗಳ ಜಮೀನುಗಳು ಕೃಷ್ಣ ಮೇಲ್ದಂಡೆ ಯೋಜನೆಯ ಎರಡನೇ ಘಟ್ಟದಲ್ಲಿ ನೀರಾವರಿಗೆ ಒಳಪಡುತ್ತವೆ.

ಲಿಂಗಸಗೂರು, ದೇವದುರ್ಗ ಮತ್ತು ರಾಯಚೂರು ತಾಲ್ಲೂಕುಗಳು ಎಡದಂಡೆ ಕಾಲುವೆ ಕೆಳಗೆ ಬರುವುದಿಲ್ಲ ಎಂದು ಹೇಳಿದ್ದೇನೆ. ಬಲದಂಡೆಯಿಂದ ೫ ಲಕ್ಷ ೮ ಸಾವಿರ ಎಕರೆಗೆ ನೀರಾವರಿಯಾಗುತ್ತದೆಂದು ಇಷ್ಟು ಮಾತ್ರ ಹೇಳುತ್ತೇನೆ. ಇನ್ನೂ ಫಸ್ಟ್ ಸ್ಟೇಜ್ ಮುಗಿದಿಲ್ಲ, ಸೆಕೆಂಡ್ ಸ್ಟೇಜ್‌ಗೆ ಕೈಹಾಕತಕ್ಕದ್ದು ಈಗಂತೂ ಸಾಧ್ಯವಿಲ್ಲ.

ಡಾ|| ಸಂಗಮೇಶ್ವರ ಸರದಾರ್.—ಆದು ಸ್ವಲ್ಪ ತಪ್ಪಾಗಿದೆ, ಬಲದಂಡೆ ಎಂದು ಬರೆಯುವುದಕ್ಕೆ ಬದಲಾಗಿ ಎಡದಂಡೆಯಾಗಿದೆ. ಎರಡನೆಯದು ಏನೆಂದರೆ, ಶ್ರೀಮಾನ್ ವಿರೇಂದ್ರಪಾಟೀಲರು ಒನ್‌ಸೈಡೆಡ್ ಪ್ರಾಜೆಕ್ಟ್ ತೆಗೆದುಕೊಳ್ಳೋಣ ಎಂದು ಮಾಡಿದುದರಿಂದ ಅನ್ಯಾಯವಾಗಿದೆ. ನಮಗೆ ನದಿ ಇಲ್ಲವೇ, ಹಕ್ಕು ಇಲ್ಲವೇ. ಫಸ್ಟ್ ಸ್ಟೇಜ್ ಮುಗಿಯಲಿಕ್ಕೆ ೧೫ ವರ್ಷಗಳಾಗುತ್ತದೆ. ನಮ್ಮ ಜಿಲ್ಲೆಗೆ ಅನ್ಯಾಯವಾಗಿದೆ. ನಮ್ಮ ಪ್ರದೇಶ ಬರಗಾಲದ ಪ್ರದೇಶ. ಆಲ್ಲಿಗೆ ಏನಾದರೂ ಮಾಡಿ ನೀರನ್ನು ಕೊಡುತ್ತೀರಾ ?

ಶ್ರೀ ಹೆಚ್.ಡಿ. ದೇವೇಗೌಡ.—ಪಾವ್ಯ ಸದಸ್ಯರು ಬರಗಾಲ ಪ್ರದೇಶ ಎಂದು ಹೇಳಿದ್ದಾರೆ. ಅದರಲ್ಲಿ ಸತ್ಯಾಂಶವಿದೆ, ಆದು ಬರಗಾಲ ಪ್ರದೇಶ ನಿಜ. For the 2nd phase of I Stage we need Rs. 600 crores. For that we are approaching World Bank. I have already made it clear to complete the two phases